# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಶ್ರೀ ಮೋಹನ್ ಭಾಗವತ್ ಅವರು ಮುದ್ದೇನಹಳ್ಳಿಯ 'ಶ್ರೀ ಸತ್ಯಸಾಯಿ ಯೂನಿವರ್ಸಿಟಿ ಆಫ್ ಹ್ಯೂಮನ್ ಎಕ್ಸೆಲೆನ್ಸಿ'ಯ ಘಟಿಕೋತ್ಸವದಲ್ಲಿ ಪಾಲ್ಗೊಂಡಿದ್ದು ಖ್ಯಾತ ಕ್ರಿಕೆಟಿಗ ಸುನಿಲ್ ಗವಾಸ್ಕರ್ ಅವರಿಗೆ ಗೌರವ ಡಾಕ್ಟರೇಟ್ ಪ್ರಧಾನ ಮಾಡಿದರು.

ಸಂಪುಟ : 44 | ಸಂಚಿಕೆ : 8 | ಶುಭಕೃತ್ – ಶ್ರಾವಣ/ಭಾದ್ರಪದ | ಕಲಿಯುಗಾಬ್ದ 5124 | 01–08–2022 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

## ಸೇವೆ ಮತ್ತು ಸಂಸ್ಕಾರದ ಮೂಲಕ ನಾವು ಸಮಾಜವನ್ನು ಕಟ್ಟಿಬೆಳೆಸಬೇಕಿದೆ – ಡಾ. ಮೋಹನ್ ಭಾಗವತ್

ಚಿತ್ರದುರ್ಗದ ಶ್ರೀ ಶಿವಶರಣ ಮಾದಾರಚನ್ನಯ್ಯ ಗುರುಪೀಠದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಡಾ. ಮೋಹನ್ ಭಾಗವತ್ ಅವರು ದಲಿತ, ಹಿಂದುಳಿದ ವರ್ಗಗಳ 21 ಮಠಾಧೀಶರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಮತ್ತು ನಂತರ ನಡೆದ ಸಂವಾದದಲ್ಲಿ ಅನೇಕ ಸ್ವಾಮೀಜಿಯವರು ಕೇಳಿದ ಹಲವಾರು ಪ್ರಶ್ನೆಗಳಿಗೆ ಉತ್ತರ ಕೊಟ್ಟರು.

ಕಾರ್ಯಕ್ರಮದಲ್ಲಿ ಜಗದ್ಗುರು ಡಾ. ಶ್ರೀ ಶಾಂತವೀರ ಮಹಾಸ್ವಾಮೀಜಿ, ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮೀಜಿ, ಜಗದ್ಗುರು ಶ್ರೀ ಡಾ. ಪುರುಷೋತ್ತಮಾನಂದ ಸ್ವಾಮೀಜಿ, ಜಗದ್ಗುರು ಶ್ರೀ ಕೃಷ್ಣ ಯಾದವಾನಂದ ಸ್ವಾಮೀಜಿ, ಜಗದ್ಗುರು ಶ್ರೀ ಬಸವ ಮಾಚಿದೇವ ಮಹಾಸ್ವಾಮೀಜಿ, ಶ್ರೀ ಅನ್ನದಾನಿ ಭಾರತೀ ಅಪ್ಪಣ್ಣ ಸ್ವಾಮೀಜಿ, ಶ್ರೀ ಬಸವಕುಂಬಾರ ಗುಂಡಯ್ಯ ಸ್ವಾಮೀಜಿ, ಜಗದ್ಗುರು ಶ್ರೀ ರೇಣುಕಾನಂದ ಮಹಾಸ್ವಾಮೀಜಿ, ಜಗದ್ಗುರು ಶ್ರೀ ವೇಮನಾನಂದ ಮಹಾಸ್ವಾಮೀಜಿ, ಜಗದ್ಗುರು ಶ್ರೀ ಶಾಂತಭೀಷ್ಮ ಅಂಬಿಗರ ಚೌಡಯ್ಯ ಮಹಾಸ್ವಾಮೀಜಿ, ಜಗದ್ಗುರು ಶ್ರೀ ಬಸವ ಭೃಂಗೀಶ್ವರ ಮಹಾಸ್ವಾಮೀಜಿ, ಜಗದ್ಗುರು ಡಾ. ಶ್ರೀ ಬಸವಕುಮಾರ ಮಹಾಸ್ವಾಮೀಜಿ, ಜಗದ್ಗುರು ಶ್ರೀ ದಯಾನಂದಪುರಿ ಮಹಾಸ್ವಾಮೀಜಿ, ಜಗದ್ಗುರು ಶ್ರೀ ಇಮ್ಮಡಿ ಕೇತೇಶ್ವರ ಮಹಾಸ್ವಾಮೀಜಿ, ಜಗದ್ಗುರು ಶ್ರೀ ಬಸವ ನಾಗೀದೇವ ಮಹಾಸ್ವಾಮೀಜಿ, ಪರಮಪೂಜ್ಯ ಶ್ರೀ ಜ್ಞಾನಾನಂದ ಪುರಿ ಮಹಾಸ್ವಾಮೀಜಿ, ಪರಮ ಪೂಜ್ಯ ಶ್ರೀ ಮಾತಾ ಬಸ್ತದೇವಿಯವರು, ಪರಮಪೂಜ್ಯ ಬಸವ ಅರಳಯ್ಯ ಸ್ವಾಮೀಜಿ, ಪರಮಪೂಜ್ಯ ಶ್ರೀ ಪೂರ್ಣಾನಂದ ಭಾರತೀ ಸ್ವಾಮೀಜಿ, ಪರಮಪೂಜ್ಯ ಶ್ರೀ ಶ್ರೀಧರಾನಂದ ಸ್ವಾಮೀಜಿ ಆದಿಯಾಗಿ ದಲಿತ, ಹಿಂದುಳಿದ ವರ್ಗಗಳ 21 ವಿವಿಧ ಮಠಾಧೀಶರು, ಪೂಜ್ಯರು ಭಾಗವಹಿಸಿದ್ದರು. ಇದರ ನೇತೃತ್ವ ವಹಿಸಿದ್ದ ಪೂಜ್ಯ ಶ್ರೀ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿಯವರು ಎಲ್ಲರನ್ನೂ ಸ್ವಾಗತಿಸಿದರು.

ನಂತರ ಸಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಮೋಹನ್ ಭಾಗವತ್ ಅವರು "ಸಂಘಕ್ಕೆ ಹೆಚ್ಚು ಹೊಂದುವುದು ರಾಜಕೀಯ ಅಲ್ಲ. ಧಾರ್ಮಿಕತೆ ಮತ್ತು ಆಧ್ಯಾತ್ಮಿಕತೆ. ಹಾಗಾಗಿ ನಮಗೆ ಸಂಘಕ್ಕೆ ರಾಜಕೀಯದವರಿಗಿಂತ ಸ್ವಾಮೀಜಿಗಳೇ ಹೆಚ್ಚು ಹತ್ತಿರವಾಗುತ್ತಾರೆ. ನಮ್ಮ ಸಮಾಜದಲ್ಲಿ ಕೆಲವು ಭಾಗ ಹಿಂದುಳಿಯಿತು. ಏಕೆಂದರೆ ಸಂಪರ್ಕ ಮುರಿದು ಹೋಯಿತು. ಹಿಂದು ಸಮಾಜದ ಎಲ್ಲಾ ಅಂಗಗಳನ್ನು ಸುಸ್ಥಿತಿಯಲ್ಲಿಡುವುದು ಕರ್ತವ್ಯ. ಮತ್ತೆ ಮತ್ತೆ ಸೇರುವುದರಿಂದ ಇದು ಸರಿ ಆಗುತ್ತದೆ. ಇದನ್ನೇ ಸಮರಸತೆ ಎನ್ನುವರು. ಸಂಘ ಇದೇ ಪ್ರಯತ್ನ ಮಾಡುತ್ತಿದೆ. ಸಮಾಜದ ಎಲ್ಲಾ ಅಂಗಗಳ ಬಗ್ಗೆ ಸಂವೇದನೆ ಇರಬೇಕು. ಪರಸ್ಪರ ಆಗಾಗ ಸೇರುವುದರಿಂದ ನಮಗೆ ಪರಸ್ಪರರ ಬಗ್ಗೆ ಅರಿವು ಹೆಚ್ಚಾಗುತ್ತದೆ. ಅರಿವು ಹೆಚ್ಚಾದಾಗ ಸಂಶಯಗಳು, ಅಪನಂಬಿಕೆಗಳು ದೂರ ಆಗುತ್ತವೆ. ಆಗ ಮನಸ್ಸುಗಳು ಒಂದಾಗುತ್ತವೆ. ರಾ. ಸ್ವ. ಸಂಘ ಮತ್ತು ಮಠಗಳು ಹಾಗೂ ಸ್ವಾಮೀಜಿಗಳೂ ಪರಸ್ಪರ ಮತ್ತೆ ಮತ್ತೆ ಭೇಟಿ ಮಾಡುತ್ತಿರಬೇಕು."



"ಹಿಂದೂ ಸಮಾಜದ ಪ್ರಮುಖ ಸಮಸ್ಯೆಗಳಾದ ಅಸ್ಪೃಶ್ಯತೆ, ವಿಷಮತೆ, ಅಸಮಾನತೆ ಇವುಗಳು ಮುಖ್ಯವಾಗಿ ಇರುವುದು ನಮ್ಮ ಮನಸ್ಸಿನಲ್ಲಿ. ಶಾಸ್ತ್ರಗಳಲ್ಲಿ ಸಮಸ್ಯೆ ಇಲ್ಲ. ಮತ್ತು ಈ ಸಮಸ್ಯೆಗಳು ಹಲವಾರು ಶತಮಾನಗಳಿಂದ ನಮ್ಮ ಮನಸ್ಸಿನಲ್ಲಿ ಉಳಿದಿವೆ. ಹಾಗಾಗಿ ಇದರ ಪರಿಹಾರಕ್ಕೂ ಸಮಯ ತಗುಲುವುದು. ನಿಧಾನವಾಗಿ ಇದನ್ನು ಮನಸ್ಸಿನಿಂದ ತೆಗೆಯುವ ಕೆಲಸವಾಗಬೇಕಿದೆ. ಅಲ್ಲಿಯವರೆಗೂ ಸಹನೆ ಮತ್ತು ಧೈರ್ಯವನ್ನು ನಾವು ಹೊಂದಬೇಕು. ಅದು ಆಗೇ ಆಗುತ್ತದೆ. ಮತ್ತು ಆ ಕಾರ್ಯದಲ್ಲಿ ನಾವು ನಿರತರಾಗಿದ್ದೇವೆ. ಭಾರತ ಭಾರತವಾಗಿ ಉಳಿಯಬೇಕಾದರೆ, ನಾವು ನಾವಾಗಿ ಉಳಿಯಬೇಕು. ಇಲ್ಲದಿದ್ದರೆ ಭಾರತ ಭಾರತವಾಗಿ ಉಳಿಯುವುದಿಲ್ಲ. ಹಾಗಾಗಿ ಧರ್ಮವು ಎಲ್ಲಕಡೆ ಓತಪ್ರೋತವಾಗಿ ಇರುವಂತೆ ಆಗಬೇಕು. ಮತಾಂತರ ಆಗುವುದರಿಂದ ನಮ್ಮಲ್ಲಿ ಪ್ರತ್ಯೇಕತೆಯನ್ನು ತರುತ್ತದೆ. ಮೂಲದಿಂದ ಬೇರಿನಿಂದ ಮತಾಂತರ ಆದವರು ದೂರ ಉಳಿಯುವಂತೆ ಮಾಡುತ್ತದೆ. ಹಾಗಾಗಿ ನಾವು ಮತಾಂತರವನ್ನು ತಡೆಯುವ ಪ್ರಯತ್ನ ಮಾಡಬೇಕು."




"ಸಂಸ್ಕಾರದ ಬಗ್ಗೆಯೂ ಗಮನಹರಿಸಬೇಕಿದೆ. ದೊಡ್ಡವರಿಗೆ ಗೌರವಕೊಡುವುದು, ನಮ್ಮ ಮಾತೆಯರು ಸೋದರಿಯಲ್ಲಿ ಹೇಗೆ ನಡೆದುಕೊಳ್ಳಬೇಕು? ಇವುಗಳನ್ನು ನಮ್ಮ ಸಮಾಜದ ನವ ಪೀಳಿಗೆಗಳಿಗೆ ಹೇಳಿಕೊಡಬೇಕಿದೆ. ಆಧುನಿಕ ವಿದ್ಯಾಭ್ಯಾಸದೊಂದಿಗೆ ಶಿಕ್ಷಣ ಸಿಗುತ್ತಿದೆ, ಆದರೆ ಸಂಸ್ಕಾರ ಸ್ವಲ್ಪ ದೂರ ಆಗುತ್ತಿದೆ. ಸಂಸ್ಕಾರ, ನಿಷ್ಠೆ ದೃಢವಾಗಬೇಕು ಎಂದರೆ ಏನಾದರೂ ಒಂದು ರೀತಿಯ ಉಪಾಸನೆಯನ್ನು ಜೋಡಿಸಿಕೊಳ್ಳಬೇಕು. ನೀವು, ಸ್ವಾಮೀಜಿಗಳು. ಸಾಧನೆ, ನಿಯಮಿತ ತಪಸ್ಸನ್ನು ನೀವು ಮಾಡುವವರು. ನಿಮ್ಮ ಜೀವನದ ಕಾರಣಕ್ಕಾಗಿ ನೀವು ಇದನ್ನು ಕೊಡಲು ಅಧಿಕಾರಿಗಳು. ನೀವು ಸಮಾಜವನ್ನು ಸಂಸ್ಕಾರವಂತ ಸಮಾಜವನ್ನಾಗಿ ಎಬ್ಬಿಸಿ ನಿಲ್ಲಿಸಬೇಕು. ಎಲ್ಲರೂ ಒಟ್ಟಾಗಿ ಮುನ್ನಡೆಯಬಹುದು. ಮುನ್ನಡೆಯಬೇಕು. ಸೇವೆ ಮತ್ತು ಸಂಸ್ಕಾರದ ಮೂಲಕ ನಾವು ಸಮಾಜವನ್ನು ಕಟ್ಟಿಬೆಳೆಸಬೇಕಿದೆ. ಸತ್ಯದ ಸಾಧನೆ ಮಾಡುತ್ತಾ ಸರ್ವರ ಸೇವೆ ಮಾಡಬೇಕಿದೆ. 'ಆತ್ಮನೋ ಮೋಕ್ಷಾರ್ಥಂ ಜಗತ್ ಹಿತಾಯ ಚ' ಎಂದು ಹೇಳುತ್ತೇವೆ. ಆ ರೀತಿ ಮಾಡಬೇಕಿದೆ. ಇಂದು ನೀವೆಲ್ಲಾ ಮಠಾಧೀಶರು ಮಾಡುತ್ತಿರುವ ಪ್ರಯತ್ನ ಬೀಜರೂಪದಲ್ಲಿದೆ. ಇದು ಖಂಡಿತವಾಗಿ ಹೆಮ್ಮರವಾಗಿ ಬೆಳೆಯುತ್ತದೆ. ಫಲವನ್ನೂ ನೆರಳನ್ನೂ ನೀಡುತ್ತದೆ. ಮಾತ್ರವಲ್ಲ ಸಾವಿರಾರು ಬೀಜಗಳನ್ನು ಸೃಷ್ಟಿಸಿ ಅವೂ ಭೂಮಿಗೆ ತಾಗಿ ಸಸಿಗಳಾಗಿ ಬೆಳೆದು ಹೆಮ್ಮರವಾಗಿ ನಿಂತು ಫಲಗಳನ್ನೂ ನೀಡುವಂತೆ ಖಂಡಿತವಾಗಿ ಬೆಳೆದೇ ಬೆಳಯುತ್ತವೆ."

"ರಾಷ್ಟ್ರೀಯ ಸ್ವಯಂಸೇವಕ ಸಂಘ ನಿಮ್ಮ ಜೊತೆ ಇದೆ. ಏನೇಬರಲಿ, ಸಂಘ ನಿಮ್ಮ ಜೊತೆ ಇದೆ. ನಮ್ಮದೇ ಒಂದು ಶೈಲಿ ಇದೆ. ಆ ಶೈಲಿಯಲ್ಲೇ ನಾವು ಮಾಡುತ್ತೇವೆ. ಸಂಘದ ರೀತಿ ಅತ್ಯಂತ ಪ್ರಾಕೃತಿಕವಾಗಿದ್ದು. ಸಂಘದ ಗತಿ ನಿಧಾನ ಗತಿ. ನಿಧಾನವಾಗಿ ಹೋದರೆ ದೂರಸಾಗಬಹುದು. ನಿಮ್ಮ ಜೊತೆ ಇದ್ದೇವೆ. ನಿಮ್ಮ ಜೊತೆ ಇರುತ್ತೇವೆ. ನಾವು ದೊಡ್ಡವರು ಎಂಬ ಕಾರಣಕ್ಕಾಗಿ ಅಲ್ಲ. ಬದಲಾಗಿ ಇದು ನಮ್ಮ ಕರ್ತವ್ಯ, ಹಾಗಾಗಿ. ನೀವು ಸಂಘವನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಿ. ನಾವೆಲ್ಲರೂ ಹಿಂದು ಸಮಾಜದ ಅವಿಭಾಜ್ಯ ಅಂಗ", ಎಂದು ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ನಾ. ತಿಪ್ಪೇಸ್ವಾಮಿಯವರು ಕಾರ್ಯಕ್ರಮವನ್ನು ನಿರೂಪಿಸಿದರು. ಆರೆಸ್ಸೆಸ್‌ನ ಸಹಸರಕಾರ್ಯವಾಹರಾದ ಮುಕುಂದ, ಕ್ಷೇತ್ರೀಯ ಪ್ರಚಾರಕರಾದ ಸುಧೀರ, ಕ್ಷೇತ್ರೀಯ ಕಾರ್ಯವಾಹರಾದ ನಾ. ತಿಪ್ಪೇಸ್ವಾಮಿ, ಪಟ್ಟಾಭಿರಾಮ, ಗುರುಪ್ರಸಾದ, ನಂದೀಶ, ಸಾಮರಸ್ಯ ವೇದಿಕೆಯ ವಾದಿರಾಜ, ವಿ.ಹಿಂ.ಪರಿಷತ್‌ನ ಬಸವರಾಜ ಸಂವಾದ ಸಭೆಯಲ್ಲಿದ್ದರು.

# ಸಂಸ್ಮರಣೆ

## ಸ್ವಾಮಿ ಚಿನ್ಮಯಾನಂದ (8ನೇ ಮೇ, 1916 – 3ನೇ ಆಗಸ್ಟ್ 1993)



ಭಗವದ್ಗೀತೆಯನ್ನು ನಮ್ಮ ಕಾಲದ ಜನಕ್ಕೆ ಹತ್ತಿರ ತಂದುಕೊಟ್ಟ ಮಹನೀಯರು ಸ್ವಾಮಿ ಚಿನ್ಮಯಾನಂದರು. ಭಗವದ್ಗೀತೆ'ಯ ಅಧ್ಯಾತ್ಮಿಕ ಮಹತ್ತತೆಯನ್ನು ಲೌಕಿಕದ ಜನರಿಗೆ ಹತ್ತಿರವಾಗಿಸಿ ಅದನ್ನು ನಿತ್ಯದ ಜೀವನದಲ್ಲಿ ಉಪಯೋಗಿಸುವುದು ಹೇಗೆ ಎಂದು ಮನವರಿಕೆ ಮಾಡಿಕೊಟ್ಟ ಮಹನೀಯರು ಸ್ವಾಮಿ ಚಿನ್ಮಯಾನಂದರು. ಅವರ 'ಭಗವದ್ಗೀತೆ'ಯ ಕುರಿತಾದ ಗೀತಾಜ್ಞಾನಯಜ್ಞ, ಉಪನಿಷದ್ ಮತ್ತು ಶಂಕರ ವೇದಾಂತಗಳ ಕುರಿತಾದ ಉಪನ್ಯಾಸಗಳು, ಪುಸ್ತಕಗಳು ಭಗವದ್ಗೀತೆಯಲ್ಲಿ ಮತ್ತು ಭಾರತೀಯ ಅಧ್ಯಾತ್ಮಿಕ ತತ್ವದಲ್ಲಿ ಜನಾಸಕ್ತಿಯನ್ನು ಮೂಡಿಸಿದ ಸೇವೆಗಳು ಅದ್ವಿತೀಯವಾದದ್ದು.

ಸ್ವಾಮೀಜಿಗಳ ಪೂರ್ವಾಶ್ರಮದ ಹೆಸರು ಬಾಲಕೃಷ್ಣ ಮೆನನ್. ತಂದೆ ನ್ಯಾಯಾಧೀಶರಾಗಿದ್ದರು. ಎಳವೆಯಿಂದಲೇ ಬಾಲಕೃಷ್ಣನ ಬುದ್ಧಿ ತೀಕ್ಷ್ಣವಾಗಿತ್ತು. ತ್ರಿಚೂರಿನಲ್ಲಿ ಬಿ.ಎ. ಪದವಿಗಳಿಸಿ ಸ್ನಾತಕಕ್ಕಾಗಿ ಉತ್ತರದ ಲಖನೌಗೆ ಪಯಣಿಸಿ ಇಂಗ್ಲೀಶ್ ಸಾಹಿತ್ಯದಲ್ಲಿ ಸ್ನಾತಕ ಪದವಿ ಪಡೆದರು. ಈ ಮಧ್ಯೆ ಸ್ವಾತಂತ್ರ್ಯ ಚಳವಳಿಯ ಕಾವಿಗೆ ಸಿಲುಕಿ ಸೆರೆವಾಸವನ್ನೂ ಅನುಭವಿಸಿದರು. ಜೈಲಿನಿಂದ ಹೊರ ಬಂದ ಅವರು 'ದಿ ನ್ಯಾಷನಲ್ ಹೆರಾಲ್ಡ್' ಪತ್ರಿಕೆಯ ವರದಿಗಾರರಾಗಿ ಕಾರ್ಯನಿರ್ವಹಿಸತೊಡಗಿದ್ದರು.

ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬಾಲಕೃಷ್ಣ ಮೆನನ್ನರಿಗೆ, ಹಿಮಾಲಯದಲ್ಲಿ ಸಾಧುಗಳೆಂದು ಹೇಳಿಕೊಳ್ಳುತ್ತಾ ಜೀವಿಸುವ ಸಮುದಾಯದವರ ಕುರಿತಾಗಿ, ಡೋಂಗಿಗಳು, ಮೋಸದವರೆಂಬ ಭಾವವಿತ್ತು. ಇದು ಇಂಗ್ಲೀಷ್ ಶಿಕ್ಷಣ ಅವರ ಮನಸ್ಸಿನ ಮೇಲೆ ಮೂಡಿಸಿದ್ದ ಪ್ರಭಾವ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಇಂತಹವರ ಡೋಂಗಿತನವನ್ನು, ಕಪಟಗಳನ್ನು ಬಯಲುಮಾಡುವ 'ವಿಶಿಷ್ಟ ಪತ್ರಿಕಾ ವರದಿ' ಮೂಡಿಸುವಾಸೆ ಅವರಲ್ಲಿ ಗರಿಗೆದರಿತು. ಈ ಹುಮ್ಮಸ್ಸಿನಲ್ಲಿ ಅವರು ಹೃಷಿಕೇಶದಲ್ಲಿರುವ 'ಆನಂದ ಕುಟೀರ'ದಲ್ಲಿನ ಸ್ವಾಮಿ ಶಿವಾನಂದರ ಆಶ್ರಮಕ್ಕೆ ಪ್ರಯಾಣ ಬೆಳೆಸಿದರು.

ಸಾಧು–ಸಂತರ ಬದುಕಿನ ಬಗೆಗೆ ತಾವು ಭಾವಿಸಿಕೊಂಡಿದ್ದ ವ್ಯತಿರಿಕ್ತ ಬದುಕನ್ನು ಅನ್ವೇಷಿಸ ಹೊರಟಿದ್ದ ಬಾಲಕೃಷ್ಣ ಮೆನನ್‌ರ ಯಾತ್ರೆ ಪಡೆದ ತಿರುವು ಅನಿರೀಕ್ಷಿತವಾಗಿತ್ತು. ಬಹಿರ್ಮುಖವಾಗಿ ಹೊರಟಿದ್ದ ಈ ಅನ್ವೇಷಣೆ ಇದ್ದಕ್ಕಿದ್ದಂತೆ ಅಂತರ್ಮುಖವಾಗಿ ಹರಿಯತೊಡಗಿತು. ತಮ್ಮ ಹೊರಗನ್ನು ಅನ್ವೇಷಿಸಿ ಬಯಲು ಮಾಡ ಹೊರಟಿದ್ದ ಅವರು, ತಮ್ಮನ್ನೇ ಅನ್ವೇಷಿಸಿ ಬಯಲು ಮಾಡಿಕೊಳ್ಳತೊಡಗಿದರು. ಈ ಪ್ರಕ್ರಿಯೆ ಆಧ್ಯಾತ್ಮಿಕದ ಹಾದಿಯಲ್ಲಿ ಚಿಗುರೊಡೆಯಲಾರಂಭಿಸಿತು.

ಸ್ವಾಮಿ ಶಿವಾನಂದರ ದೈವೀತೇಜಸ್ಸು, ಪ್ರೇಮ ಮತ್ತು ವೇದಾಂತದ ಚಿಂತನೆಗಳು ಈ ಯುವ ಹೃದಯದ ಮೇಲೆ ಅಪಾರ ಪರಿಣಾಮ ಬೀರಿದವು. ಅಂತರಂಗದ ಅಪೂರ್ವವಾದ ಬದಲಾವಣೆಗಳು ತೆರೆದುಕೊಳ್ಳತೊಡಗಿದವು. ಹೀಗಾಗಿ ಅವರು ತಮ್ಮ ಬದುಕಿನ ಮೂಲ ಉದ್ದೇಶವನ್ನೇ ಪ್ರಶ್ನಿಸಿಕೊಳ್ಳಲಾರಂಭಿಸಿ ಶಾಶ್ವತವಾದ ಸಂತೋಷದ ಒಳಗುಟ್ಟೇನಿರಬಹುದು ಎಂಬ ಕುರಿತು ಶೋಧಕ್ಕೆ ಮೊದಲು ಮಾಡಿದರು. ಮಹಾನ್ ಸಂತರ ಸಾಂಗತ್ಯ ಮತ್ತು ಅವರ ಬೋಧನೆಗಳನ್ನು ಸವಿಯುವುದರ ಜೊತೆ ಜೊತೆಗೆ ತಾವೇ ಬಿಡುಗಡೆಯ ಹಾದಿಯನ್ನೂ ಆಯ್ದುಕೊಂಡರು. ಸ್ವಾಮಿ ಶಿವಾನಂದರು ಇವರಿಗೆ 'ಸ್ವಾಮಿ ಚಿನ್ಮಯಾನಂದ ಸರಸ್ವತಿ' ಎಂಬ ಹೆಸರನ್ನಿಟ್ಟರು.


ಸ್ವಾಮಿ ಶಿವಾನಂದರು ಶಿಷ್ಯ ಚಿನ್ಮಯಾನಂದರನ್ನು ಹಿಮಾಲಯದ ಉತ್ತರಕಾಶಿಯಲ್ಲಿದ್ದ ತಮ್ಮ ಕಾಲದ ಶ್ರೇಷ್ಠ ವೇದಾಂತಿಗಳಾದ ಸ್ವಾಮಿ ತಪೋವನರ ಬಳಿ ಕಳುಹಿಸಿಕೊಟ್ಟರು. ಸ್ವಾಮಿ ತಪೋವನರು ಶಿಷ್ಯರನ್ನು ಆಯ್ದುಕೊಳ್ಳುವುದು ಅತೀ ವಿರಳವಾಗಿತ್ತು. ಹಾಗೆ ಆಯ್ದುಕೊಂಡವರನ್ನು ಕೂಡಾ ಅವರು ಹಲವಾರು ಕಠಿಣ ಪರೀಕ್ಷೆಗಳಿಗೆ ಈಡು ಮಾಡಿ, ಅವರಿಗೆ ಅತ್ಯಂತ ಕಟ್ಟುನಿಟ್ಟಾದ ನಿಬಂಧನೆಗಳನ್ನು ವಿಧಿಸುತ್ತಿದ್ದರು. ಈ ಎಲ್ಲವನ್ನೂ ನಿಷ್ಠೆಯಿಂದ ಒಪ್ಪಿಕೊಂಡ ಚಿನ್ಮಯಾನಂದರು ಸಂತ ಸ್ವಾಮಿ ತಪೋವನರ ಶಿಷ್ಯರಾಗಿ ಸಕಲಸಂಗ ಪರಿತ್ಯಾಗಿಗಳಾಗಿ ವೇದಾಂತದ ಆಳವಾದ ಅಧ್ಯಯನವನ್ನು ಕೈಗೊಂಡರು.

ಗುರುಗಳ ಮಾರ್ಗದರ್ಶನ ಮತ್ತು ಕೃಪಾಶೀರ್ವಾದದ ಜೊತೆಗೆ ಗಂಗಾಮಾತೆಯ ಪರಿಶುದ್ಧ ಹರಿವು ಮತ್ತು ಮಾನವಕುಲಕ್ಕಾಗಿನ ಆಕೆಯ ನಿತ್ಯ ಸೇವಾಹರಿವಿನಲ್ಲಿ ಪುನೀತರಾಗಿ ಆಧ್ಯಾತ್ಮಿಕ ಅನುಭಾವವನ್ನು ಪಡೆದುಕೊಂಡ ಸ್ವಾಮಿ ಚಿನ್ಮಯಾನಂದರು, ತಮ್ಮ ಗುರುವಿನಿಂದ ಜನಸಾಮಾನ್ಯರಿಗೆ ವೇದಾಂತದ ಸುಜ್ಞಾನವನ್ನು ತಲುಪಿಸಬೇಕೆಂಬ ಆದೇಶವನ್ನು ಪಡೆದರು.

ಸ್ವಾಮಿ ಚಿನ್ಮಯಾನಂದರ ಉಪನ್ಯಾಸಗಳಿಗೆ ಜ್ಞಾನಯಜ್ಞವೆಂದು ಹೆಸರು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನ ಉಪದೇಶಗಳಿಗೆ ಜ್ಞಾನ ಯಜ್ಞವೆಂಬ ಉಲ್ಲೇಖವಿದೆ. ದಿವ್ಯ ಜ್ಞಾನದ ಸಂಪಾದನೆಗಾಗಿ ನಿಷ್ಠ ಅಭಿಲಾಷಿಯು ನಡೆಸುವ ಶ್ರದ್ಧಾವಂತ ಶಾಸ್ತ್ರಾಧ್ಯಯನಕ್ಕೆ ಯಜ್ಞವೆಂದು ಹೆಸರು. ಸ್ವಾಮಿ ಚಿನ್ಮಯಾನಂದರು ತಮ್ಮ ಮೊದಲ ಜ್ಞಾನಯಜ್ಞವೆಂಬ ಸರಣಿ ಉಪನ್ಯಾಸಗಳನ್ನು 1951ರ ಡಿಸೆಂಬರ್ ಮಾಸದಲ್ಲಿ ಪುಣೆಯಲ್ಲಿನ ಪುಟ್ಟ ದೇಗುಲವೊಂದರಲ್ಲಿ ನಡೆಸಿಕೊಟ್ಟರು. ವೇದಗಳ ಅಧ್ಯಯನ ಮತ್ತು ಸ್ವಯಂ ಅನುಭಾವಗಳಿಂದ ಶ್ರೀಮಂತವಾಗಿದ್ದ ಅವರ ಉಪನ್ಯಾಸಗಳು ದಿನೇ ದಿನೇ ವಿಶ್ವದೆಲ್ಲೆಡೆಯಿಂದ ಸಹಸ್ರಾರು ಜನರನ್ನಾಕರ್ಷಿಸತೊಡಗಿದವು. ಹೀಗೆ ಬೆಳೆದ ಅವರ ಅಭಿಮಾನಿ ಬಳಗ 1953ರಲ್ಲಿ 'ಚಿನ್ಮಯ ಮಿಷನ್' ಎಂಬ ಸಂಘಟನೆಗೆ ಚಾಲನೆಯನ್ನು ನೀಡಿತು.

20ನೇ ಶತಮಾನದ ದ್ವಿತೀಯಾರ್ಧದಲ್ಲಿ ವೇದಾಂತ ಚಿಂತನೆ ಮತ್ತು ಕಾರ್ಯಗಳ ಪರಿಚಯವನ್ನು ವಿಶ್ವದೆಲ್ಲೆಡೆ ಕೊಂಡೊಯ್ಯುವುದರ ಮೂಲಕ ಸ್ವಾಮಿ ಚಿನ್ಮಯಾನಂದರು ಮಾಡಿದ ಕ್ರಾಂತಿ ಅಪೂರ್ವವಾದದ್ದು. ತಮ್ಮ ಬರವಣಿಗೆ ಮತ್ತು ಉಪನ್ಯಾಸಗಳಲ್ಲಿ ಅವರು ಮುಟ್ಟುತ್ತಿದ್ದ ಆಳ, ತಳೆಯುತ್ತಿದ್ದ ಸ್ಪಷ್ಟತೆ, ನಿಖರ, ಆಕರ್ಷಕ, ಹಾಸ್ಯಲೇಪಿತ ಸ್ವಾನುಭೂತಿ ಸರಿಸಾಟಿಯಿಲ್ಲದ್ದು. ನಲವತ್ತೆರಡು ವರ್ಷಗಳ ಕಾಲ ಅಹರ್ನಿಶಿ ದುಡಿದ ಸ್ವಾಮಿಜಿಗಳು ತಮ್ಮ ಅಪಾರ ಶ್ರಮದಿಂದ ವೇದಾಂತದ ಸೌಗಂಧವನ್ನು ತಾವು ಹೋದಲ್ಲೆಲ್ಲಾ ಪಸರಿಸಿ ಆಗಸ್ಟ್ 3, 1993ರಂದು ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿದ್ದ ಸಂದರ್ಭದಲ್ಲಿ ಇಹಲೋಕದ ಯಾತ್ರೆ ಪೂರೈಸಿದರು.

## ಸಾಮರಸ್ಯಕ್ಕೆ ಬೇಕು ತೆರೆದ ಮನಸ್ಸು




ಪುಸ್ತಕ ಪರಿಚಯ

ಲೇಖಕರು: ರಾಜೇಶ್ ಪದ್ಮಾರ್

ಸಾಮರಸ್ಯದ ಸಮಾಜವನ್ನು ಹಂಬಲಿಸಿ ಸಾವಿರಾರು ಜನ ಕೆಲಸ ಮಾಡಿದ್ದಾರೆ. ಆದರೂ ಪೂರ್ಣಸಿದ್ಧಿ ಸಿಕ್ಕಿಲ್ಲ. ಸಮಸ್ಯೆಯ ಬೇರುಗಳು ಆಳದಲ್ಲಿದೆ, ದೌರ್ಬಲ್ಯಗಳಿಂದ ಉಂಟಾದ ಬಿರುಕುಗಳಲ್ಲಿ ಬೇರುಗಳು ಚಾಚಿವೆ. ಮತ್ತೂ ಬೆಳದಿವೆ. ಜಾತೀಯತೆ, ಅಸ್ಪೃಶ್ಯತೆಯಿಂದ ನೊಂದವರು 'ನಮಗೆ ಮುಕ್ತಿ ಬೇಡ, ಬಿಡುಗಡೆ ಸಾಕು' ಎನ್ನುವಷ್ಟು ರೋಸಿಹೋಗಿದ್ದಾರೆ.

ಸಾಮರಸ್ಯದ ಸಂವೇದನೆಯ ಪ್ರಮಾಣ ಸಾಕೆನುಸುತ್ತಿಲ್ಲ. ಅದು ವೇಗವಾಗಿ ವ್ಯಾಪಕತೆ ಪಡೆಯಬೇಕು – ಈ ಆಶಯವನ್ನು ಹೊತ್ತು ಲೇಖಕರಾದ ರಾಜೇಶ್ ಪದ್ಮಾರ್ ಅವರು ಹಲವರ ಅನುಭಗಳನ್ನು ಗ್ರಹಿಸಿ ಈ ಪುಸ್ತಕವನ್ನು ಬರೆದಿದ್ದಾರೆ. ಪುಸ್ತಕದ ಓದು ನಮ್ಮೊಳಗಿನ ಆಲೋಚನೆಯ, ಕ್ರಿಯಾಶೀಲತೆಯ ದೀಪವನ್ನು ಬೆಳಗಿಸುತ್ತದೆ.
ಆ ಬೆಳಕು ಸಮರಸತೆಯ ದಾರಿಗಳನ್ನು ತೆರೆದಿಡುತ್ತದೆ.

**ರಾಷ್ಟ್ರೋತ್ಥಾನ ಸಾಹಿತ್ಯ : 06360581957**

## ಎಲ್ಲೋ ಕೇಳಿದ ಕಥೆ

ಓರ್ವ ಭಿಕ್ಷುಕನಿದ್ದನು. ದೇವರ ಮೇಲೆ ಶ್ರದ್ಧೆ ಇದ್ದ ಕಾರಣ ಅವನು ದಿನಪೂರ್ತಿ ನಾಮಜಪ ಮಾಡುತ್ತಿದ್ದನು. ಭಗವಂತನು ಅವನ ನಾಮಜಪದಿಂದ ಪ್ರಸನ್ನನಾಗಿ ಒಂದು ದಿನ ಅವನೆದುರು ಪ್ರಕಟವಾದನು. ಭಗವಂತನು 'ನಾನು ನಿನ್ನ ನಾಮಜಪದಿಂದ ಬಹಳ ಪ್ರಸನ್ನನಾಗಿದ್ದೇನೆ, ನಿನಗೆ ಬೇಕಾದದ್ದನ್ನು ಕೇಳು' ಎಂದು ಹೇಳಿದನು. ಆಗ ಭಿಕ್ಷುಕನು ದುರಾಸೆಯಿಂದ ಚಿನ್ನದ ನಾಣ್ಯಗಳನ್ನು ಕೇಳಿದನು. ಭಗವಂತನು 'ಚಿನ್ನದ ನಾಣ್ಯಗಳನ್ನು ಯಾವ ಪಾತ್ರೆಯಲ್ಲಿ ತೆಗೆದುಕೊಳ್ಳುವೆ?' ಎಂದು ಕೇಳಿದಾಗ ಭಿಕ್ಷುಕನು ತನ್ನ ಅಂಗಿಯನ್ನು ಮುಂದೆಮಾಡಿದನು.

ಭಗವಂತನು ಚಿನ್ನದ ನಾಣ್ಯಗಳನ್ನು ಕೊಡುವ ಮೊದಲು 'ಎಲ್ಲಿಯವರೆಗೆ ನೀನು ಚಿನ್ನದ ನಾಣ್ಯಗಳನ್ನು ಕೇಳುವುದು ಬಿಡುವುದಿಲ್ಲ ಅಲ್ಲಿಯವರೆಗೆ ನಾನು ನಿನ್ನ ಅಂಗಿಯಲ್ಲಿ ಚಿನ್ನದ ನಾಣ್ಯಗಳನ್ನು ಹಾಕುತ್ತಲೇ ಇರುವೆನು. ಆದರೆ ಭೂಮಿಯ ಮೇಲೆ ಚಿನ್ನದ ನಾಣ್ಯಗಳು ಬೀಳಬಾರದು. ನೆಲದ ಮೇಲೆ ಬಿದ್ದರೆ ಈ ನಾಣ್ಯಗಳು ಮಣ್ಣಾಗುವವು' ಎಂದು ಹೇಳಿದನು. ಭಿಕ್ಷುಕನು ಒಪ್ಪಿಕೊಂಡ. ಭಗವಂತನು ಭಿಕ್ಷುಕನ ಅಂಗಿಯಲ್ಲಿ ಚಿನ್ನದ ನಾಣ್ಯಗಳನ್ನು ಹಾಕತೊಡಗಿದ. ಅಂಗಿಯು ತುಂಬುತ್ತ ಹೋಯಿತು ಹಾಗೂ ಭಿಕ್ಷುಕನ ದುರಾಸೆಯು ಹೆಚ್ಚುತ್ತ ಹೋಯಿತು. ಅವನು 'ಸಾಕು' ಎಂದು ಹೇಳಲಿಲ್ಲ, ದೇವರು ಕೊಡುವುದನ್ನು ನಿಲ್ಲಿಸಲಿಲ್ಲ. ಕೊನೆಯಲ್ಲಿ ಚಿನ್ನದ ನಾಣ್ಯಗಳ ಭಾರವನ್ನು ಆ ಅಂಗಿಯು ತಡೆದುಕೊಳ್ಳಲಿಲ್ಲ, ಅಂಗಿಯು ಹರಿದು ಹೋಯಿತು. ಇದರಿಂದ ಎಲ್ಲ ನಾಣ್ಯಗಳು ನೆಲದ ಮೇಲೆ ಬಿದ್ದು ಮಣ್ಣಾದವು.

ಮನಸ್ಸಿನಲ್ಲಿ ದುರಾಸೆ ಇರುವುದರಿಂದ ಇಷ್ಟೊಂದು ನಾಣ್ಯಗಳು ದೊರೆತರೂ ಭಿಕ್ಷುಕನು ಬಡವನಾಗಿಯೇ ಉಳಿದನು. ಈ ಕಥೆಯಿಂದ ಭಿಕ್ಷುಕನು ಎಲ್ಲಿ ತಪ್ಪಿದನು ಎಂಬುದು ಗಮನಕ್ಕೆ ಬಂದಿರಬಹುದು. ಅವನು ದುರಾಸೆ ಬಿಟ್ಟು, ಅವನ ಜೀವನಕ್ಕೆ ಬೇಕಾಗುವಷ್ಟು ನಾಣ್ಯಗಳಲ್ಲಿ ಸಂತುಷ್ಟನಾಗಿದ್ದರೆ ಅವನಿಗೆ ಅಷ್ಟೂ ಚಿನ್ನದ ನಾಣ್ಯಗಳು ದೊರೆಯುತ್ತಿದ್ದವು. ಭಗವಂತನು ನೀಡಿದ್ದರಲ್ಲಿ ಸಂತೋಷದಿಂದ ಇರಬೇಕು. ದುರಾಸೆಯು ಬಹಳ ಕೆಟ್ಟದ್ದಾಗಿದೆ. ದುರಾಸೆಯಿಂದ ನಮಗೆ ಏನೂ ದೊರೆಯುವುದಿಲ್ಲ. ತಮಗೆ ಯಾವಾಗಲೂ ಆನಂದದಿಂದ ಇರಬೇಕಿದ್ದರೆ ಸಿಕ್ಕಿರುವುದರಲ್ಲಿ ಸಂತೋಷದಿಂದ ಇರಲು ಕಲಿಯಬೇಕು.

## ಭಾರತ ವಿಶ್ವದ 98 ದೇಶಗಳಿಗೆ 235 ಮಿಲಿಯನ್ ಕೋವಿಡ್ ಲಸಿಕೆ ಪೂರೈಸಿದೆ

ಭಾರತದ ವೈಜ್ಞಾನಿಕ ಸಂಶೋಧನೆ ಮತ್ತು ಲಸಿಕೆ ತಯಾರಿಕಾ ಪರಿಸರ ವ್ಯವಸ್ಥೆಯನ್ನು ಶ್ಲಾಘಿಸಿರುವ ನೀತಿ ಆಯೋಗದ ಉಪಾಧ್ಯಕ್ಷ ಡಾ. ಸುಮನ್ ಕೆ. ಬೆರ್ರಿ ಅವರು, ಕೋವಿಡ್–19 ಸಾಂಕ್ರಾಮಿಕದ ಪರಿಣಾಮವನ್ನು ತಗ್ಗಿಸಲು, ಜೀವನೋಪಾಯಗಳು ಮತ್ತು ಜೀವಗಳನ್ನು ರಕ್ಷಿಸಲು ಭಾರತವು ಹಲವಾರು ಉಪಕ್ರಮಗಳು ಮತ್ತು ಕೇಂದ್ರೀಕೃತ ಮಧ್ಯಸ್ಥಿಕೆಗಳನ್ನು ಪರಿಚಯಿಸಿದೆ ಎಂದು ಹೇಳಿದರು.

ಉನ್ನತ ಮಟ್ಟದ ರಾಜಕೀಯ ವೇದಿಕೆಯನ್ನು ಉದ್ದೇಶಿಸಿ ಮಾತನಾಡಿದ ಉಪಾಧ್ಯಕ್ಷರು, ಭಾರತದ ಲಸಿಕೆ ಉತ್ಪಾದನಾ ಪರಿಸರ ವ್ಯವಸ್ಥೆಯು ವಿಶ್ವದ ಅತ್ಯಂತ ವ್ಯಾಪಕವಾದ ಉಚಿತ ಲಸಿಕೆ ಕಾರ್ಯಕ್ರಮಕ್ಕೆ ಕಾರಣವಾಯಿತು, 1.98 ಬಿಲಿಯನ್ ಡೋಸ್‌ಗಳು ದೂರದ ಪ್ರದೇಶಗಳು ಸೇರಿದಂತೆ ದೇಶದ ಎಲ್ಲಾ ಭಾಗಗಳನ್ನು ತಲುಪಿವೆ. 'ಲಸಿಕೆ ಮೈತ್ರಿ' ಉಪಕ್ರಮದ ಅಡಿಯಲ್ಲಿ, ಭಾರತವು ವಿಶ್ವದ 98 ದೇಶಗಳಿಗೆ 235 ಮಿಲಿಯನ್‌ಗೂ ಹೆಚ್ಚು ಕೋವಿಡ್–19 ಲಸಿಕೆಗಳನ್ನು ಪೂರೈಸಿದೆ ಎಂದರು. ಪರಿಸರಕ್ಕೆ ಸಂಬಂಧಿಸಿದಂತೆ ಮಾತನಾಡಿದ ಅವರು, ಪ್ರಧಾನಿ ಮೋದಿ ಅವರು COP–27ನಲ್ಲಿ ಭಾರತದ ಗುರಿಗಳನ್ನು ಸ್ಪಷ್ಟಪಡಿಸಿದ್ದಾರೆ ಮತ್ತು ನಾವು ಇದಕ್ಕೆ ಬದ್ಧರಾಗಿದ್ದೇವೆ ಎಂದರು.

ಸುಸ್ಥಿರ ಅಭಿವೃದ್ಧಿ ಗುರಿಗಳ ಚೌಕಟ್ಟು ಸಂದರ್ಭಕ್ಕೆ ನಿರ್ಣಾಯಕವಾಗಿದೆ. ಏಕೆಂದರೆ, ಇದು ಅಭಿವೃದ್ಧಿಯ ಹೊಸ ಕೋರ್ಸ್ ಅನ್ನು ರೂಪಿಸಲು ನಮಗೆ ಅನುವು ಮಾಡಿಕೊಡುತ್ತದೆ ಮತ್ತು ನಾವು ನಮ್ಮ ಬದ್ಧತೆಯನ್ನು ದೃಢೀಕರಿಸುತ್ತೇವೆ ಎಂದರು.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ

# ನಾಲುದ್ದದ ಸುದ್ದಿಗಳು

## ರಾಜ್ಯದಲ್ಲಿ 1 ಕೋಟಿ ರಾಷ್ಟ್ರಧ್ವಜ ಹಾರಿಸಲು ಸಜ್ಜಾಗಿದೆ ಸರ್ಕಾರ



'ಹರ್ ಘರ್ ತಿರಂಗಾ' ಯೋಜನೆಯಡಿ ರಾಜ್ಯದಲ್ಲಿ 1 ಕೋಟಿ ರಾಷ್ಟ್ರ ಧ್ವಜ ಹಾರಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಸಜ್ಜಾಗಿದೆ.

ಸರ್ಕಾರಿ, ಸರ್ಕಾರೇತರ ಸಂಸ್ಥೆಗಳು, ಶಾಲಾ ಕಾಲೇಜುಗಳಲ್ಲಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಉದ್ದೇಶದಿಂದ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ. ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಕನ್ನಡ ಮತ್ತು ಸಂಸ್ಕೃತಿ, ಪೊಲೀಸ್ ಇಲಾಖೆ ಸೇರಿ ಈಗಾಗಲೇ ಕಾರ್ಯಕ್ರಮ ಅನುಷ್ಠಾನಕ್ಕೆ ಸಭೆಗಳು ನಡೆಯುತ್ತಿದೆ ಎಂದು ಮುಖ್ಯಮಂತ್ರಿಗಳು ನಿನ್ನೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ತಿಳಿಸಿದರು.

ಶೇಕಡಾ 60ರಷ್ಟು ಗ್ರಾಮೀಣ ಪ್ರದೇಶ ಮತ್ತು ಶೇಕಡ 40ರಷ್ಟು ಬಿಬಿಎಂಪಿ ವ್ಯಾಪ್ತಿ ಸೇರಿ ನಗರ ಪ್ರದೇಶಗಳ ಮನೆಗಳು, ಸರ್ಕಾರಿ ಕಚೇರಿಗಳಲ್ಲಿ ಧ್ವಜ ಹಾರಿಸುವ ಮೂಲಕ ಒಂದು ಕೋಟಿ ತ್ರಿವರ್ಣ ಧ್ವಜಗಳನ್ನು ಹಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದಿದ್ದಾರೆ.

## 16ನೇ ಉನ್ನತ ಮಟ್ಟದ ಮಿಲಿಟರಿ ಮಾತುಕತೆ ನಡೆಸಿದ ಭಾರತ–ಚೀನಾ

ನಾಲ್ಕು ತಿಂಗಳ ಬಳಿಕ ಭಾರತ ಮತ್ತು ಚೀನಾ 16ನೇ ಸುತ್ತಿನ ಉನ್ನತ ಮಟ್ಟದ ಮಿಲಿಟರಿ ಮಾತುಕತೆಯನ್ನು ಭಾನುವಾರ ನಡೆಸಿವೆ. ನಿನ್ನೆ ನಡೆದ ಸಭೆಯಲ್ಲಿ ಪೂರ್ವ ಲಡಾಖ್‌ನಲ್ಲಿನ ಎಲ್ಲಾ ಘರ್ಷಣಾ ಸ್ಥಳಗಳಿಂದ ಪಡೆಗಳನ್ನು ಶೀಘ್ರವಾಗಿ ಹಿಂಪಡೆಯುವಂತೆ ಭಾರತ ಚೀನಾವನ್ನು ಒತ್ತಾಯಿಸಿದೆ.

ಈ ಪ್ರದೇಶದ ಎಲ್‌ಎಸಿಯ ಭಾರತೀಯ ಭಾಗದಲ್ಲಿರುವ ಚುಶುಲ್ ಮೊಲ್ಡೊ ಮೀಟಿಂಗ್ ಪಾಯಿಂಟ್‌ನಲ್ಲಿ ಬೆಳಿಗ್ಗೆ 9.30ಕ್ಕೆ ಮಾತುಕತೆ ಪ್ರಾರಂಭವಾಯಿತು ಮತ್ತು ರಾತ್ರಿ ಸುಮಾರು 10 ಗಂಟೆಗೆ ಕೊನೆಗೊಂಡಿತು ಎಂದು ಮೂಲಗಳು ತಿಳಿಸಿವೆ. ಹಾಟ್ ಸ್ಪ್ರಿಂಗ್ಸ್ ಪ್ರದೇಶದಲ್ಲಿನ ಪೆಟ್ರೋಲಿಂಗ್ ಪಾಯಿಂಟ್–15ರಲ್ಲಿ ಪಡೆಗಳನ್ನು ಹಿಂಪಡೆಯುವ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಕುರಿತು ಮಾತುಕತೆಯಲ್ಲಿ ಪ್ರಗತಿಯಾಗಿದೆ ಎಂದು ಹೇಳಲಾಗಿದೆ.

ಭಾರತೀಯ ನಿಯೋಗದ ನೇತೃತ್ವವನ್ನು ಲೇಹ್ ಮೂಲದ 14 ಕಾರ್ಪ್ಸ್‌ನ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಅನಿಂಧ್ಯಾ ಸೇನ್ ಗುಪ್ತಾ ವಹಿಸಿದ್ದರೆ, ಚೀನಾ ತಂಡದ ನೇತೃತ್ವವನ್ನು ದಕ್ಷಿಣ ಕ್ಸಿನ್ಜಿಯಾಂಗ್ ಮಿಲಿಟರಿ ಜಿಲ್ಲಾ ಮುಖ್ಯಸ್ಥ ಮೇಜರ್ ಜನರಲ್ ಯಾಂಗ್ ಲಿನ್ ವಹಿಸಿದ್ದಾರೆ.

## 200 ಕೋಟಿ ಡೋಸ್ ಲಸಿಕೆ ನೀಡಿಕೆ: ಭಾರತ ಐತಿಹಾಸಿಕ ಸಾಧನೆ




ಭಾರತವು ಎರಡು ಕೋಟಿ ಕೋವಿಡ್–19 ಲಸಿಕೆ ಡೋಸ್ ಅನ್ನು ತನ್ನ ನಾಗರಿಕರಿಗೆ ನೀಡಿದೆ ಎಂದು ಕೇಂದ್ರ ಆರೋಗ್ಯ ಸಚಿವ ಡಾ. ಮನ್ಸುಖ್ ಮಾಂಡವಿಯಾ ಇಂದು ಘೋಷಿಸಿದ್ದಾರೆ. ಭಾರತದಲ್ಲಿ 16 ಜನವರಿ 2021 ರಂದು ವ್ಯಾಕ್ಸಿನೇಷನ್ ಪ್ರಾರಂಭವಾದ 18 ತಿಂಗಳ ನಂತರ ಭಾರತದ ಒಟ್ಟು ಕೋವಿಡ್–19 ಲಸಿಕೆ ಕವರೇಜ್ ಇಂದು 200 ಕೋಟಿ ದಾಟಿದೆ.

ಕೇಂದ್ರ ಆರೋಗ್ಯ ಸಚಿವರು ತಮ್ಮ ಟ್ವಿಟ್ಟರ್ ಹ್ಯಾಂಡಲ್‌ನಲ್ಲಿ ದೇಶದ ಕೋ–ವಿನ್ ವೆಬ್ಸೈಟ್ ಎರಡು ಬಿಲಿಯನ್ ಲಸಿಕೆ ಡೋಸ್‌ಗಳನ್ನು ಎಣಿಸುವ ವೀಡಿಯೊವನ್ನು ಹಂಚಿಕೊಂಡಿದ್ದಾರೆ. ಮತ್ತು ಅದಕ್ಕೆ 17 ಜುಲೈ 2022, ಶಾಶ್ವತವಾಗಿ ನೆನಪಿಡುವ ದಿನ. 200 ಕೋಟಿ ಲಸಿಕೆಗಳು ಎಂದು ಶೀರ್ಷಿಕೆ ನೀಡಿದ್ದಾರೆ.

"ಭಾರತವು ಇಲ್ಲಿಯವರೆಗೆ ಕೋವಿಡ್–19 ಲಸಿಕೆಯ 2 ಡೋಸ್ ದಾಟಿದೆ ಎಂಬುದು ನಮಗೆ ಹೆಮ್ಮೆಯ ವಿಷಯವಾಗಿದೆ. ಈ ಸಾಧನೆಗಾಗಿ ನಾನು ಆರೋಗ್ಯ ಕಾರ್ಯಕರ್ತರು ಮತ್ತು ನಾಗರಿಕರನ್ನು ಅಭಿನಂದಿಸುತ್ತೇನೆ" ಎಂದು ಡಾ. ಮನ್ಸುಖ್ ಮಾಂಡವಿಯಾ ಹೇಳಿದ್ದಾರೆ.

## 5 ಕೋಟಿ ಜನರು ಪಡೆದಿದ್ದಾರೆ ಇ–ಸಂಜೀವನಿ ಟೆಲಿ ಸಮಾಲೋಚನೆಯ ಪ್ರಯೋಜನ

ಇ–ಸಂಜೀವನಿ ಟೆಲಿ ಸಮಾಲೋಚನೆಯ ಪ್ರಯೋಜನವನ್ನು ಐದು ಕೋಟಿಗೂ ಹೆಚ್ಚು ಜನರು ಪಡೆದುಕೊಂಡಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವ ಡಾ. ಮನ್ಸುಖ್ ಮಾಂಡವಿಯಾ ಹೇಳಿದ್ದಾರೆ.





ಆರೋಗ್ಯ ಸೇವೆಗಳನ್ನು ಪಡೆಯಲು ಈ ನವೀನ ಡಿಜಿಟಲ್ ಮಾಧ್ಯಮವನ್ನು ಬಳಸಿಕೊಂಡು ರೋಗಿಗಳು ಪ್ರತಿದಿನ ವೈದ್ಯರು ಮತ್ತು ತಜ್ಞರೊಂದಿಗೆ ಸಮಾಲೋಚಿಸುತ್ತಾರೆ. ದೇಶದ ದೂರದ ಪ್ರದೇಶಗಳಲ್ಲಿ ವಾಸಿಸುವ ಬಡವರು ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳಲ್ಲಿ ತಜ್ಞ ವೈದ್ಯರ ಸಲಹೆಯನ್ನು ಪಡೆಯುತ್ತಿದ್ದಾರೆ ಎಂದು ಡಾ. ಮಾಂಡವಿಯಾ ಟ್ವೀಟರ್‌ನಲ್ಲಿ ತಿಳಿಸಿದ್ದಾರೆ.

ಇ–ಸಂಜೀವನಿ ಡಿಜಿಟಲ್ ಆರೋಗ್ಯ ಕಾಳಜಿಯ ಅತ್ಯುತ್ತಮ ಉದಾಹರಣೆಯಾಗಿದ್ದು, ಜನರು ಆ್ಯಪ್ ಮೂಲಕ ಇ–ಸಂಜೀವನಿ ಟೆಲಿ ಸಮಾಲೋಚನೆಯ ಪ್ರಯೋಜನವನ್ನು ಪಡೆಯಬಹುದು ಎಂದು ಅವರು ಹೇಳಿದರು.

## ಮೇ ತಿಂಗಳಲ್ಲಿ 19.6%ರಷ್ಟು ಜಿಗಿತ ಕಂಡ ಕೈಗಾರಿಕಾ ಉತ್ಪಾದನೆ

ಕೈಗಾರಿಕಾ ಉತ್ಪಾದನೆಯ ಸೂಚ್ಯಂಕವು (ಐಐಪಿ) ಈ ವರ್ಷದ ಮೇ ತಿಂಗಳಲ್ಲಿ 19.6 ಪ್ರತಿಶತದಷ್ಟು ಜಿಗಿದಿದ್ದು, ಹಿಂದಿನ ತಿಂಗಳಿಗೆ ಹೋಲಿಸಿದರೆ ಇದು ಶೇಕಡಾ 7.1 ರಷ್ಟಿತ್ತು.




ನ್ಯಾಷನಲ್ ಸ್ಟ್ಯಾಟಿಸ್ಟಿಕಲ್ ಆಫೀಸ್ ಬಿಡುಗಡೆ ಮಾಡಿದ ಅಂಕಿಅಂಶಗಳ ಪ್ರಕಾರ, ಈ ವರ್ಷದ ಮೇ ತಿಂಗಳಲ್ಲಿ ಉತ್ಪಾದನಾ ವಲಯದ ಉತ್ಪಾದನೆಯು 20.6 ಪ್ರತಿಶತದಷ್ಟು ಬೆಳೆದಿದೆ. ಗಣಿಗಾರಿಕೆ ಉತ್ಪಾದನೆಯು 10.9 ಪ್ರತಿಶತ ಮತ್ತು ವಿದ್ಯುತ್ ವಲಯವು 23.5 ಪ್ರತಿಶತದಷ್ಟು ಏರಿಕೆಯನ್ನು ಕಂಡಿದೆ. ಕಳೆದ ವರ್ಷ ಮೇ ತಿಂಗಳಲ್ಲಿ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕವು ಶೇ.27.6ರಷ್ಟು ಬೆಳವಣಿಗೆ ಕಂಡಿತ್ತು. ಮಾರ್ಚ್ 2020 ರಿಂದ ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಕೈಗಾರಿಕಾ ಉತ್ಪಾದನೆಯು 18.7 ಪ್ರತಿಶತದಷ್ಟು ಕುಸಿದಿದೆ.

ಐಐಪಿ ಎನ್ನುವುದು ಆರ್ಥಿಕತೆಯ ವಿವಿಧ ಕ್ಷೇತ್ರಗಳ ಬೆಳವಣಿಗೆಯನ್ನು ವಿವರಿಸುವ ಒಂದು ಸೂಚ್ಯಂಕವಾಗಿದೆ. ಎಂಟು ಕೋರ್ ಇಂಡಸ್ಟ್ರೀಸ್ ಐಐಪಿಯಲ್ಲಿ ಒಳಗೊಂಡಿದೆ. ಅವುಗಳೆಂದರೆ ವಿದ್ಯುತ್, ಉಕ್ಕು, ಸಂಸ್ಕರಣಾಗಾರ ಉತ್ಪನ್ನಗಳು, ಕಚ್ಚಾ ತೈಲ, ಕಲ್ಲಿದ್ದಲು, ಸಿಮೆಂಟ್, ನೈಸರ್ಗಿಕ ಅನಿಲ ಮತ್ತು ರಸಗೊಬ್ಬರಗಳು.

## ರೂಪಾಯಿಗಳಲ್ಲಿ ವಹಿವಾಟು ರಷ್ಯಾ, ಇರಾನ್‌ನೊಂದಿಗಿನ ವ್ಯಾಪಾರ ಸುಲಭಗೊಳಿಸಲಿದೆ

ಆಮದುದಾರರಿಗೆ ರೂಪಾಯಿಯಲ್ಲಿ ಪಾವತಿಸಲು ಮತ್ತು ರಫ್ತುದಾರರಿಗೆ ರೂಪಾಯಿಗಳಲ್ಲಿ ಪಾವತಿ ನೀಡಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕೈಗೊಂಡ ನಿರ್ಧಾರವು ರಷ್ಯಾ, ಇರಾನ್ ಮತ್ತು ದಕ್ಷಿಣ ಏಷ್ಯಾದ ನೆರೆಹೊರೆಯವರೊಂದಿಗೆ ಭಾರತದ ವ್ಯಾಪಾರವನ್ನು ಸುಲಭಗೊಳಿಸಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಭಾರತೀಯ ಕರೆನ್ಸಿಯನ್ನು ಅಂತರರಾಷ್ಟ್ರೀಯಗೊಳಿಸುವ ದೀರ್ಘಾವಧಿಯ ಗುರಿಗೆ ಈ ನಿರ್ಧಾರ ಸಹಾಯ ಮಾಡುತ್ತದೆ ಎಂದು ತಜ್ಞರು ಅಭಿಪ್ರಾಯಿಸಿದ್ದಾರೆ.


ಭಾರತೀಯ ರಿಸರ್ವ್ ಬ್ಯಾಂಕ್ ತಕ್ಷಣವೇ ಜಾರಿಗೆ ಬರುವಂತೆ ಭಾರತೀಯ ರೂಪಾಯಿಗಳಲ್ಲಿ (INR) ಅಂತರಾಷ್ಟ್ರೀಯ ವ್ಯಾಪಾರ ಕಾರ್ಯವಿಧಾನವನ್ನು ಜಾರಿಗೆ ತಂದಿದೆ.



"ಭಾರತದಿಂದ ರಫ್ತಿಗೆ ಒತ್ತು ನೀಡುವ ಮೂಲಕ ಜಾಗತಿಕ ವ್ಯಾಪಾರದ ಬೆಳವಣಿಗೆಯನ್ನು ಉತ್ತೇಜಿಸಲು ಮತ್ತು ರೂಪಾಯಿಯಲ್ಲಿ ಜಾಗತಿಕ ವ್ಯಾಪಾರ ಸಮುದಾಯದ ಹೆಚ್ಚುತ್ತಿರುವ ಆಸಕ್ತಿಯನ್ನು ಬೆಂಬಲಿಸಲು, ಇನ್ವಾಯ್ಸ್, ಪಾವತಿ ಮತ್ತು ಇತ್ಯರ್ಥಕ್ಕೆ ಹೆಚ್ಚುವರಿ ವ್ಯವಸ್ಥೆಯನ್ನು ತರಲು INR ನಲ್ಲಿ ರಫ್ತು/ಆಮದುಗಳು ನಿರ್ಧರಿಸಲಾಗಿದೆ" ಎಂದು ಆರ್‌ಬಿಐ ಹೇಳಿದೆ.

"ಈ ನಿರ್ಧಾರ ವಿಶೇಷವಾಗಿ ನೆರೆಯ ದೇಶಗಳಿಗೆ ಮತ್ತು ತಮ್ಮ ನಿಯಮಗಳಲ್ಲಿ ವ್ಯಾಪಾರ ವೈವಿಧ್ಯೀಕರಣಕ್ಕಾಗಿ ರೂಪಾಯಿಯನ್ನು ಮೂಲ ಕರೆನ್ಸಿಯಾಗಿ ಬಳಸಲು ಸಿದ್ಧರಿರುವ ದೇಶಗಳಿಗೆ ವಿಶೇಷವಾಗಿ ಉಪಯುಕ್ತವಾಗಬಹುದು" ಎಂದು ಬಾರ್ಕ್ಲೇಸ್‌ನ ಭಾರತದ ಮುಖ್ಯ ಅರ್ಥಶಾಸ್ತ್ರಜ್ಞ ರಾಹುಲ್ ಬಜೋರಿಯಾ ಹೇಳಿದ್ದಾರೆ.

## ಕೇರಳದ ಕಣ್ಣೂರಿನಲ್ಲಿ ಆರ್‌ಎಸ್‌ಎಸ್ ಕಛೇರಿ ಮೇಲೆ ದಾಳಿ




ಕೇರಳದ ಕಣ್ಣೂರು ಜಿಲ್ಲೆಯ ಪಯ್ಯನ್ನೂರಿನಲ್ಲಿರುವ ಆರ್‌ಎಸ್‌ಎಸ್ ಕಚೇರಿ ಮೇಲೆ ಬಾಂಬ್ ದಾಳಿ ನಡೆದಿದೆ. ಮುಂಜಾನೆ ಘಟನೆ ಸಂಭವಿಸಿದ್ದು, ದಾಳಿಯಲ್ಲಿ ಕಟ್ಟಡದ ಕಿಟಕಿ ಗಾಜುಗಳು ಒಡೆದಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳೀಯ ಪೊಲೀಸ್ ಠಾಣೆ ಸಮೀಪದಲ್ಲಿಯೇ ಈ ದಾಳಿ ನಡೆದಿದೆ. ಘಟನೆಯಲ್ಲಿ ಯಾವುದೇ ಪ್ರಾಣಹಾನಿಯಾಗಿರುವ ಬಗ್ಗೆ ವರದಿಯಾಗಿಲ್ಲ ಎಂದು ಮೂಲಗಳು ಸ್ಪಷ್ಟಪಡಿಸಿವೆ.

ದಾಳಿ ನಡೆಸಿದವರು ಯಾರು, ಯಾವ ಉದ್ದೇಶಕ್ಕಾಗಿ ಕೃತ್ಯ ಎಸಗಲಾಗಿದೆ ಎಂಬಿತ್ಯಾದಿ ಮಾಹಿತಿಗಳು ಇನ್ನೂ ಲಭ್ಯವಾಗಿಲ್ಲ. ಈ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

## ವಿಕ್ರಮ ವಾರ ಪತ್ರಿಕೆಗೆ 75 ವರ್ಷ: ಮೋಹನ್ ಭಾಗವತ್ ಅವರಿಂದ ವಿಶೇಷ ಲೋಗೋ ಬಿಡುಗಡೆ

ವಿಕ್ರಮ ವಾರಪತ್ರಿಕೆಯು 75ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಸಂದರ್ಭದಲ್ಲಿ ವಿಶೇಷ ಲೋಗೋವನ್ನು ಇಂದು ಬೆಳಿಗ್ಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಶ್ರೀ ಮೋಹನ್ ಭಾಗವತ್ ಅವರು ಬೆಂಗಳೂರಿನ ಕೇಶವ ಕೃಪಾದಲ್ಲಿ ಬಿಡುಗಡೆ ಮಾಡಿದರು.




ಈ ಸಂದರ್ಭದಲ್ಲಿ ಗೌರವ ಸಂಪಾದಕರಾದ ಶ್ರೀ ನ. ನಾಗರಾಜ, ಸಂಪಾದಕರಾದ ಶ್ರೀ ವೃಷಾಂಕ ಭಟ್, ವ್ಯವಸ್ಥಾಪಕ ಸಂಪಾದಕರಾದ ಶ್ರೀ ಸು. ನಾಗರಾಜ್, ವ್ಯವಸ್ಥಾಪಕರಾದ ಶ್ರೀ ಸತೀಶ್.ಬಿ ಉಪಸ್ಥಿತರಿದ್ದರು.

ವಿಕ್ರಮ ವಾರಪತ್ರಿಕೆಯು ಪ್ರಖರ ರಾಷ್ಟ್ರೀಯ ವಿಚಾರಗಳನ್ನು ನಿರಂತರವಾಗಿ ಪ್ರತಿಪಾದಿಸುತ್ತಾ ಬಂದಿದ್ದು 1948ರ ಗುರುಪೂರ್ಣಿಮಾ ದಿನದಂದು ಉದ್ಘಾಟನೆಗೊಂಡಿತ್ತು.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th JULY 2022

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 01-08-2022





Jal Jeeven Mission

## ಜಲ ಜೀವನ ಮಿಷನ್: ದೇಶದಲ್ಲಿ ಒದಗಿಸಲಾಗಿದೆ 6.56 ಕೋಟಿಯಲ್ಲಿ ನೀರಿನ ಸಂಪರ್ಕ

35 ತಿಂಗಳುಗಳಲ್ಲಿ, ಜಲ ಜೀವನ್ ಮಿಷನ್ ದೇಶಾದ್ಯಂತ 6.56 ಕೋಟಿ ಹೊಸ ಟ್ಯಾಪ್ ವಾಟರ್ ಸಂಪರ್ಕಗಳನ್ನು ಒದಗಿಸಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ. ದೇಶದ ಶೇಕಡಾ 51ಕ್ಕೂ ಹೆಚ್ಚು ಗ್ರಾಮೀಣ ಜನಸಂಖ್ಯೆಯು ಕುಡಿಯುವ ನೀರನ್ನು ಪಡೆಯುತ್ತಿದೆ ಎಂದು ಜಲ ಶಕ್ತಿ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.


ಪ್ರಧಾನಮಂತ್ರಿ ನರೇಂದ್ರ ಮೋದಿಯವರು 15 ಆಗಸ್ಟ್ 2019 ರಂದು ಕೆಂಪು ಕೋಟೆಯ ಆವರಣದಿಂದ ಜಲ ಜೀವನ್ ಮಿಷನ್ ಅನ್ನು ಘೋಷಿಸಿದ್ದರು.

2024ರ ವೇಳೆಗೆ ನಿಯಮಿತ ಮತ್ತು ದೀರ್ಘಾವಧಿಯ ಆಧಾರದ ಮೇಲೆ ಪ್ರತಿ ಗ್ರಾಮೀಣ ಮನೆಗಳಿಗೆ ಸಾಕಷ್ಟು ಪ್ರಮಾಣದಲ್ಲಿ ನಿಗದಿತ ಗುಣಮಟ್ಟದಲ್ಲಿ ನಲ್ಲಿ ನೀರು ಸರಬರಾಜು ಮಾಡುವುದನ್ನು ಖಚಿತಪಡಿಸಿಕೊಳ್ಳಲು ಜಲ ಜೀವನ್ ಮಿಷನ್ ಅನ್ನು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಸಹಭಾಗಿತ್ವದಲ್ಲಿ ಜಾರಿಗೊಳಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

15 ಆಗಸ್ಟ್ 2019ರಂದು, ಒಟ್ಟು 18.93 ಕೋಟಿ ಗ್ರಾಮೀಣ ಕುಟುಂಬಗಳಲ್ಲಿ, 3.23 ಕೋಟಿ (17 ಪ್ರತಿಶತ) ಕುಟುಂಬಗಳು ಮಾತ್ರ ನಲ್ಲಿ ನೀರಿನ ಸಂಪರ್ಕವನ್ನು ಹೊಂದಿದ್ದವು. ಉಳಿದ 15.70 ಕೋಟಿ ಕುಟುಂಬಗಳು ತಮ್ಮ ದೈನಂದಿನ ನೀರಿನ ಅಗತ್ಯಗಳಿಗಾಗಿ ನದಿ, ಬಾವಿ, ಕೊಳ, ಸ್ಟ್ಯಾಂಡ್ ಪೋಸ್ಟ್ ಮತ್ತು ಚಿಲುಮೆಯನ್ನು ಅವಲಂಬಿಸಿದ್ದವು.

2024 ರ ವೇಳೆಗೆ ಭಾರತದ ಗ್ರಾಮೀಣ ಪ್ರದೇಶದ ಎಲ್ಲಾ ಮನೆಗಳಿಗೆ ವೈಯಕ್ತಿಕ ಮನೆ ಮನೆ ನಲ್ಲಿ ಸಂಪರ್ಕಗಳ ಮೂಲಕ ಸುರಕ್ಷಿತ ಮತ್ತು ಸಮರ್ಪಕ ಕುಡಿಯುವ ನೀರನ್ನು ಒದಗಿಸುವುದು ಯೋಜನೆಯ ಉದ್ದೇಶ.

## ಲಡಾಖ್‌ನಲ್ಲಿ ದಲೈಲಾಮ: ಚೀನಾಗೆ ದಿಟ್ಟ ಸಂದೇಶ




ಬೌದ್ಧ ಧರ್ಮ ಗುರು ದಲೈಲಾಮ ಅವರು ಹಲವು ವರ್ಷಗಳ ಬಳಿಕ ಲಡಾಖ್‌ಗೆ ತೆರಳಿದ್ದು, ಚೀನಾಗೆ ದಿಟ್ಟ ಸಂದೇಶವನ್ನು ರವಾನಿಸಿದ್ದಾರೆ.

ದಲೈಲಾಮ ಅವರು ಗುರುವಾರ ಲಡಾಖ್‌ಗೆ ಬಂದಿಳಿದಿದ್ದು, ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದಾರೆ. ಮೂಲಗಳ ಪ್ರಕಾರ ಅವರು ಒಂದು ತಿಂಗಳುಗಳ ಕಾಲ ಲೇಹ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಚೀನಾದ ಪೀಪಲ್ಸ್ ಲಿಬರೇಶನ್ ಆರ್ಮಿ ಮತ್ತು ಭಾರತೀಯ ಸೇನೆಯ ನಡುವೆ ಗಡಿಯುದ್ಧಕ್ಕೂ ದೀರ್ಘಾವಧಿಯ ಘರ್ಷಣೆಯ ನಡುವೆ ಲಡಾಖ್‌ಗೆ ದಲೈಲಾಮಾ ಅವರ ಭೇಟಿಯು ಚೀನಾವನ್ನು ಅಸಮಾಧಾನಗೊಳಿಸುವ ಸಾಧ್ಯತೆಯಿದೆ ಎಂದು ವರದಿಗಳು ತಿಳಿಸಿವೆ.

ದಲೈಲಾಮಾ ಅವರು ಜಮ್ಮು ತಲುಪಿದ ಕೂಡಲೇ, ಟಿಬೆಟ್‌ನ ಸಂಪೂರ್ಣ ಸ್ವಾತಂತ್ರ್ಯವನ್ನು ಬಯಸುತ್ತಿಲ್ಲ, ಆದರೆ ಟಿಬೆಟಿಯನ್ ಬೌದ್ಧ ಸಂಸ್ಕೃತಿಯ ಸಂರಕ್ಷಣೆ ಮತ್ತು ಚೀನಾದೊಳಗೆ ಅರ್ಥಪೂರ್ಣ ಸ್ವಾಯತ್ತತೆಯನ್ನು ಬಯಸುತ್ತಿರುವುದಾಗಿ ಚೀನಾಗೆ ಸಂದೇಶ ನೀಡಿದ್ದಾರೆ.

## NIRF ರ್‍ಯಾಂಕಿಂಗ್: 3ನೇ ವರ್ಷವೂ IISc ಬೆಂಗಳೂರು ಅತ್ಯುತ್ತಮ ಶಿಕ್ಷಣ ಸಂಸ್ಥೆ

ಭಾರತದ ಉನ್ನತ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಿಗೆ ಶ್ರೇಯಾಂಕ ನೀಡುವ ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಚೌಕಟ್ಟನ್ನು (NIRF) ಇಂದು ಬಿಡುಗಡೆ ಮಾಡಲಾಗಿದೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು NIRF ಇಂಡಿಯಾ ರ್‍ಯಾಂಕ್ಸ್ 2022 ಅನ್ನು ಬಿಡುಗಡೆ ಮಾಡಿದ್ದಾರೆ.



ಈ ಪಟ್ಟಿಯಲ್ಲಿ ಐಐಟಿ ಮದ್ರಾಸ್ ಅತ್ಯುತ್ತಮ ಶಿಕ್ಷಣ ಸಂಸ್ಥೆಯಾಗಿ ಮೊದಲ ಸ್ಥಾನ ಪಡೆದರೆ, ಬೆಂಗಳೂರಿನಲ್ಲಿರುವ ಭಾರತೀಯ ವಿಜ್ಞಾನ ಸಂಸ್ಥೆ (IISc) ಸತತ 3ನೇ ವರ್ಷವೂ ಅತ್ಯುತ್ತಮ ಶಿಕ್ಷಣ ಸಂಸ್ಥೆಯಾಗಿ ಹೊರ ಹೊಮ್ಮಿದೆ.

ದಂತ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ವಿಭಾಗದಲ್ಲಿ ಕಳೆದ ವರ್ಷ ಮೊದಲ ಸ್ಥಾನದಲ್ಲಿದ್ದ ಕರ್ನಾಟಕದ ಉಡುಪಿಯಲ್ಲಿರುವ ಮಣಿಪಾಲ್ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್ ಈ ಬಾರಿ 2ನೇ ಸ್ಥಾನ ಪಡೆದಿದೆ.

ಇಂಜಿನಿಯರಿಂಗ್, ನಿರ್ವಹಣೆ, ಕಾನೂನು, ಫಾರ್ಮಸಿ, ವೈದ್ಯಕೀಯ, ದಂತ ವೈದ್ಯಕೀಯ, ವಾಸ್ತುಶಿಲ್ಪ, ಕಾಲೇಜು, ವಿಶ್ವವಿದ್ಯಾನಿಲಯಗಳು, ಸಂಶೋಧನೆ ಮುಂತಾದ 11 ವಿಭಾಗಗಳಿಗೆ ಶ್ರೇಯಾಂಕಗಳನ್ನು ವಿವಿಧ ಮಾನದಂಡಗಳಡಿ ನೀಡಲಾಗಿದೆ. ತಮ್ಮ ಪ್ರವರ್ಗದ ಶ್ರೇಯಾಂಕದಲ್ಲಿ ಅಗ್ರಸ್ಥಾನ ಪಡೆದ ಶಿಕ್ಷಣ ಸಂಸ್ಥೆಗಳ ಪಟ್ಟಿ ಬಿಡುಗಡೆಗೊಳಿಸಿ ಮಾತನಾಡಿದ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್, ಸಂಸ್ಥೆಗಳನ್ನು ಅಭಿನಂದಿಸಿದ್ದಾರೆ.

## ಕೆನಡಾ ವಿಷ್ಣು ದೇಗುಲದಲ್ಲಿನ ಗಾಂಧಿ ಪ್ರತಿಮೆ ವಿರೂಪ: ಭಾರತ ಆಕ್ರೋಶ

ಕೆನಡಾದ ಒಂಟಾರಿಯೊದ ರಿಚ್ಮಂಡ್ ಹಿಲ್ ನಗರದಲ್ಲಿ ಮಹಾತ್ಮ ಗಾಂಧಿಯವರ ಪ್ರತಿಮೆಯನ್ನು ಅಪವಿತ್ರಗೊಳಿಸಲಾಗಿದ್ದು, ಈ ಬಗ್ಗೆ ಭಾರತವು ಬುಧವಾರ ತೀವ್ರ ಸ್ವರೂಪದ ಆಕ್ರೋಶವನ್ನು ವ್ಯಕ್ತಪಡಿಸಿದೆ. ಯೋಂಗ್ ಸ್ಟ್ರೀಟ್ ಆಂಡ್ ಗಾರ್ಡನ್ ಅವೆನ್ಯೂ ಪ್ರದೇಶದಲ್ಲಿನ ವಿಷ್ಣು ಮಂದಿರದ ಆವರಣದಲ್ಲಿರುವ ಪ್ರತಿಮೆಯನ್ನು ಧ್ವಂಸಗೊಳಿಸಲಾಗಿದೆ ಎಂದು ಕೆನಡಾದ ಬ್ರಾಡ್ಕಾಸ್ಟಿಂಗ್ ಕಾರ್ಪೊರೇಷನ್ (ಸಿಬಿಸಿ) ಯಾರ್ಕ್ ಪ್ರಾದೇಶಿಕ ಪೊಲೀಸರು ತಿಳಿಸಿದ್ದಾರೆ.




"ರಿಚ್ಮಂಡ್ ಹಿಲ್‌ನಲ್ಲಿರುವ ವಿಷ್ಣು ದೇವಾಲಯದಲ್ಲಿ ಮಹಾತ್ಮ ಗಾಂಧಿ ಪ್ರತಿಮೆಗೆ ಅವಮಾನ ಮಾಡಲಾಗಿದ್ದು, ಈ ಘಟನೆಯಿಂದ ನಾವು ದುಃಖಿತರಾಗಿದ್ದೇವೆ. ಈ ಕ್ರಿಮಿನಲ್, ದ್ವೇಷಪೂರಿತ ವಿಧ್ವಂಸಕ ಕೃತ್ಯವು ಕೆನಡಾದ ಭಾರತೀಯ ಸಮುದಾಯದ ಭಾವನೆಗಳನ್ನು ಆಳವಾಗಿ ಘಾಸಿಗೊಳಿಸಿದೆ. ಈ ದ್ವೇಷದ ಅಪರಾಧದ ತನಿಖೆಗಾಗಿ ನಾವು ಕೆನಡಾದ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದೇವೆ" ಎಂದು ಟೊರೊಂಟೊದಲ್ಲಿರುವ ಭಾರತೀಯ ಕಾನ್ಸುಲೇಟ್ ಜನರಲ್ ಟ್ವೀಟ್ ಮಾಡಿದ್ದಾರೆ.

ಭಾರತೀಯ ಸಮುದಾಯವನ್ನು ಭಯಭೀತಗೊಳಿಸಲು ಪ್ರಯತ್ನಿಸುತ್ತಿರುವ ಈ ದ್ವೇಷದ ಅಪರಾಧದಿಂದ ಭಾರತವು ತೀವ್ರವಾಗಿ ನೊಂದಿದೆ ಎಂದು ಒಟ್ಟಾವಾದಲ್ಲಿನ ಹೈಕಮಿಷನ್ ಹೇಳಿದೆ. ತನಿಖೆ ಮತ್ತು ಅಪರಾಧಿಗಳನ್ನು ತ್ವರಿತವಾಗಿ ನ್ಯಾಯಾಂಗಕ್ಕೆ ಎಳೆದು ತರುವುದನ್ನು ಖಚಿತಪಡಿಸಿಕೊಳ್ಳಲು ಭಾರತವು ಕೆನಡಾ ಸರ್ಕಾರವನ್ನು ಸಂಪರ್ಕಿಸಿದೆ ಎಂದು ಭಾರತೀಯ ಕಾನ್ಸುಲೇಟ್ ಹೇಳಿದೆ.

## 2020–21ರಲ್ಲಿ 41.49%ರಷ್ಟು ಕುಸಿತ ಕಂಡ ರಾಷ್ಟ್ರೀಯ ಪಕ್ಷಗಳ ದೇಣಿಗೆ

2020–21ರ ಆರ್ಥಿಕ ವರ್ಷದಲ್ಲಿ ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷಗಳು ಸ್ವೀಕರಿಸಿದ ದೇಣಿಗೆಗಳು 420 ಕೋಟಿ ರೂಪಾಯಿಗಿಂತ ಕಡಿಮೆಯಾಗಿದೆ. ಇದು ಹಿಂದಿನ ಹಣಕಾಸು ವರ್ಷಕ್ಕಿಂತ 41.49 ಪ್ರತಿಶತದಷ್ಟು ಕುಸಿತವಾಗಿದೆ ಎಂದು ಚುನಾವಣಾ ಸುಧಾರಣಾ ವಕೀಲರ ಗುಂಪು ತಿಳಿಸಿದೆ.




ದೇಣಿಗೆಗಳ ಕುಸಿತಕ್ಕೆ ಕೋವಿಡ್–19 ಸಾಂಕ್ರಾಮಿಕ ರೋಗ ಕಾರಣವಾಗಿರಬಹುದು ಎಂದು ಅದು ಅಂದಾಜಿಸಿದೆ. 2019–20ರ ಆರ್ಥಿಕ ವರ್ಷದಲ್ಲಿ 785.77 ಕೋಟಿ ರೂಪಾಯಿಗಳಿಂದ 2020–21ರ ಹಣಕಾಸು ವರ್ಷದಲ್ಲಿ 477.54 ಕೋಟಿ ರೂಪಾಯಿಗಳಿಗೆ ಬಿಜೆಪಿಗೆ ದೇಣಿಗೆ ಕಡಿಮೆಯಾಗಿದೆ. ಅಂದರೆ ಶೇಕಡಾ 39.23 ರಷ್ಟು ಕುಸಿತ ಕಂಡಿದೆ. ವಿತ್ತವರ್ಷ 2018–19ಕ್ಕೆ ಹೋಲಿಸಿದರೆ ವಿತ್ತವರ್ಷ 2019–20 ರ ಅವಧಿಯಲ್ಲಿ ಪಕ್ಷದ ದೇಣಿಗೆ 5.88 ಶೇಕಡಾ ಹೆಚ್ಚಾಗಿತ್ತು ಎಂದು ಅಸೋಸಿಯೇಶನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ADR) ಹೇಳಿಕೆಯಲ್ಲಿ ತಿಳಿಸಿದೆ.

2019–20ರ ಹಣಕಾಸು ವರ್ಷದಲ್ಲಿ ಕಾಂಗ್ರೆಸ್ ಸ್ವೀಕರಿಸಿದ ದೇಣಿಗೆಗಳು 139.016 ಕೋಟಿ ರೂಪಾಯಿಗಳಿಂದ 2020–21ರ ಹಣಕಾಸು ವರ್ಷದಲ್ಲಿ 74.524 ಕೋಟಿ ರೂಪಾಯಿಗೆ ಕುಸಿದಿದೆ. ಅಂದರೆ ಶೇ.46.39ರಷ್ಟು ಇಳಿಕೆಯಾಗಿದೆ. ವಿತ್ತವರ್ಷ 2018–19 ಮತ್ತು ವಿತ್ತವರ್ಷ 2019–20 ರ ನಡುವೆ ಅದರ ದೇಣಿಗೆಗಳು ಶೇಕಡಾ 6.44 ರಷ್ಟು ಕಡಿಮೆಯಾಗಿದೆ ಎಂದು ಹೇಳಿಕೆ ತಿಳಿಸಿದೆ.

**ಓದುಗರೇ ಗಮನಿಸಿ**

**ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021**

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.